ಮತ್ತೆ ಇಂತಾ ಕಷ್ಟ ಕೊಟ್ಟೆ ನಂಗೆ?' ಅಂತ ರಂಗಮ್ಮ ದೇವರಿಗೆ ಪ್ರಶ್ನೆ ಮಾಡುತ್ತಾ ಅಲವತ್ತುಕೊಂಡಳು. ಓದುವುದನ್ನು ಕ್ರಮೇಣ ಕಡಿಮೆ ಮಾಡಿದ ಸೌಮ್ಯ, ಶಾಲೆಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಕುಂಟುನೆಪ ಹೇಳುತ್ತಾ, ಮನೆಯಲ್ಲೇ ಕುಳಿತು ಮಂಕಾದಳು.

ರಂಗಮ್ಮನು ಮಗಳನ್ನು ಪಟ್ಟಣದಲ್ಲಿನ ವೈದ್ಯರ ಹತ್ತಿರ ತೋರಿಸಿಕೊಂಡು ಬಂದಳು. ಶಾಲೆಯಲ್ಲಿ ಅಥವಾ ಮನೆಯಲ್ಲಿ ಒತ್ತಡಗಳೇನಾದರೂ ಇದೆಯಾ? ಎಂಬ ವೈದ್ಯರ ಪ್ರಶ್ನೆಗೆ 'ಹಂಗೇನೂ ಇಲ್ಲಾ ಸಾರ್' ಎಂದಳು ರಂಗಮ್ಮ. ಕೊನೆಗೆ ಅವರು ಕೆಲವು ಮಾತ್ರೆಗಳನ್ನು ಕೊಟ್ಟು ಕಳಿಸಿದರು. ಆದರೂ ಸೌಮ್ಯಳಿಗೆ ರಾತ್ರಿ ಎದ್ದು ಬಟ್ಟೆಗಳನ್ನು ಬಿಚ್ಚಿ, ಇರುವೆಗಳನ್ನು ಕೊಡಹುವ ಕಾಯಿಲೆ ಗುಣವಾಗಲಿಲ್ಲ.

ಸ್ಕೂಲಿಗೆ ಹೋಗಿ ವಿಚಾರಿಸಿದರೆ ಏನಾದರೂ ವಿಷಯ ತಿಳಿಯಬಹುದೆಂದು ರಂಗಮ್ಮನು ಹೊರಟು ನಿಂತಾಗ ಸೌಮ್ಯ ವಿರೋಧಿಸಿದಳು. 'ನೀನು ಕೆಟ್ಟ ಬಾಯಿಯವಳು ಅಂತ ಸ್ಕೂಲಲ್ಲಿ ಎಲ್ರಿಗೂ ಗೊತ್ತು. ನೀನು ಅಲ್ಲಿಗೆ ಹೋಗಿ ಏನೇನೋ ಮಾತಾಡಿ, ನನಗಿರೋ ಮರ್ಯಾದೇನೂ ಕಳೀಬೇಡ' ಎಂದಳು. 'ನಾನು ಕೆಟ್ಟ ಬಾಯೋಳು ಆಗಿದ್ದಕ್ಕೇ ನಾವಿಬ್ಬರೂ ಇಲ್ಲೀಗಂಟ ಬದುಕಿರೋದು. ಇಲ್ಲಾಂದ್ರೆ ನನ್ನನ್ನು ಊರವರು ಯಾವಾಗ್ಲೋ ಬೀದಿಬಸವಿ ಮಾಡ್ಕೊಂಡಿರೋರು. ನನ್ನ ನಾಲಗೇನೆ ನಂಗೆ ಎಕ್ಕಡಾ, ತಿಳೀತಾ?' ಎಂದು ರಂಗಮ್ಮ ಮಗಳಿಗೆ ಪ್ರತ್ಯುತ್ತರ ಕೊಟ್ಟು, ಮಗಳ ಸ್ಕೂಲಿನ ಹತ್ತಿರ ಹೋಗಲು ರೆಡಿಯಾಗಿ ಬಸ್ ಸ್ಟ್ಯಾಂಡಿಗೆ ಬಂದಳು. ಬಸ್ಸಿಗೆ ಕಾಯುತ್ತಿದ್ದ ಕಿರಾಣಿ ಅಂಗಡಿ ನವರಂಗಿ ಮಾತಿಗೆ ಸಿಕ್ಕನು. 'ಏನ್ ರಂಗಮ್ಮಾ, ಒಬ್ಬಳೇ ಎಲ್ಲೋ ಹೊರಟಿರೋ ಹಾಗಿದೆ?' ಎಂದ.

ನವರಂಗಿಯ ಅಸಲಿ ಹೆಸರು ನಾರಾಯಣಪ್ಪ. ಅವನನ್ನು ಎಲ್ಲರೂ ನವರಂಗಿ ಎಂಬ ಅಡ್ಡಹೆಸರಿನಿಂದಲೇ ಕರೆಯುತ್ತಿದ್ದರು. ತಂದೆಯು ನಡೆಸುತ್ತಿದ್ದ ದಿನಸಿ ಅಂಗಡಿಯನ್ನು, ಅವರ ಕಾಲಾನಂತರ ಇವನೇ ನೋಡಿಕೊಳ್ಳುತ್ತಿದ್ದ. ಅದು ಮಾತ್ರವಲ್ಲದೆ ಜಾತಕ, ಕುಂಡಲಿ ನೋಡುವುದು, ಭವಿಷ್ಯ ಹೇಳುವುದು, ಇಷ್ಟವಾದವರನ್ನು ವಶಪಡಿಸಿಕೊಳ್ಳುವ ವಶೀಕರಣ ಮಂತ್ರ; ಹೀಗೆ

